ಕರ್ನಾಟಕ ಸರ್ಕಾರ

# ಶಿವಮೊಗ್ಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ

ವೈದ್ಯಕೀಯ ಶಿಕ್ಷಣ ಸ್ವಾಯತ್ತ ಸಂಸ್ಥೆ, ಸಾಗರ ರಸ್ತೆ, ಶಿವಮೊಗ್ಗ– 577201

www.sims-shimoga.com, ದೂರವಾಣಿ ಸಂಖ್ಯೆ: 08182 229933 / 264199 ಫ್ಯಾಕ್ಸ್ ಸಂಖ್ಯೆ: 08182 264100

---

ಸಂಖ್ಯೆ: ಶಿವೈವಿಸಂಶಿ/ವಾವಿ/19/2022-23 ದಿನಾಂಕ: 07.09.2022

**E-Office File No:** SIMS/ACC/MIS/18/2022-EST1-SIMS-SMG **&** **E-Office Computer No: E-** 784094

## ಅಲ್ಪಾವಧಿ ಟೆಂಡರ್ ಪ್ರಕಟಣೆ

ಶಿವಮೊಗ್ಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಕಮ್ಯೂನಿಟಿ ಮೆಡಿಸಿನ್ ವಿಭಾಗಕ್ಕೆ ಅವಶ್ಯವಿರುವಂತೆ ಹೊರಗುತ್ತಿಗೆ ಆಧಾರದ ಮೇಲೆ ವಾಹನ ಸೇವೆಯನ್ನು ಪಡೆಯಲು (ಕಾರ್ಯಾದೇಶ ನೀಡಿದಾಗಿನಿಂದ ಒಂದು ವರ್ಷದ ಅವಧಿಗೆ) ದ್ವಿ-ಲಕೋಟೆ ಪದ್ಧತಿಯಲ್ಲಿ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ. ವಿವರಗಳು ಈ ಕೆಳಕಂಡಂತಿದೆ.

| 2500 ಕಿ.ಮೀ ಪ್ರತಿ ಮಾಹೆ, ಪ್ರತಿ ವಾಹನಕ್ಕೆ | | |
|---|---|---|
| 1 | ಟೆಂಡರ್ ಪ್ರಕಟಣೆ ಸಂಖ್ಯೆ ಮತ್ತು ದಿನಾಂಕ | ಸಂಖ್ಯೆ: ಶಿವೈವಿಸಂಶಿ/ವಾವಿ/19/2022-23, ದಿನಾಂಕ: 07.09.2022 |
| 2 | ಟೆಂಡರ್‌ಗೆ ಇಟ್ಟ ಮೊತ್ತ | ವಾರ್ಷಿಕ ಅಂದಾಜು ಮೊತ್ತ ರೂ.4.80 ಲಕ್ಷಗಳು |
| 3 | ಟೆಂಡರ್ ಫಾರಂ ಬೆಲೆ | ರೂ. 500/-(ಐದು ನೂರು ರೂಪಾಯಿಗಳು) |
| 4 | ಟೆಂಡರ್ ಫಾರಂ ಸಲ್ಲಿಸಲು ಪ್ರಾರಂಭಿಸುವ ದಿನಾಂಕ | 08/09/2022 |
| 5 | ಟೆಂಡರ್ ಫಾರಂ ಸಲ್ಲಿಸಲು ಕೊನೆಯ ದಿನಾಂಕ ಮತ್ತು ವೇಳೆ | 26/09/2022 ಸಂಜೆ 05:00 ಗಂಟೆಗೆ |
| 6 | ತಾಂತ್ರಿಕ ಲಕೋಟೆ ತೆರೆಯುವ ಸ್ಥಳ, ವೇಳೆ ಮತ್ತು ದಿನಾಂಕ | ನಿರ್ದೇಶಕರ ಕೊಠಡಿ, ಸಿಮ್ಸ್, ಶಿವಮೊಗ್ಗ 27/09/2022 ಬೆಳಿಗ್ಗೆ 11:00 |
| 7 | ಆರ್ಥಿಕ ಲಕೋಟೆಯನ್ನು ತೆರೆಯುವ ಸ್ಥಳ, ವೇಳೆ ಮತ್ತು ದಿನಾಂಕ | ನಿರ್ದೇಶಕರ ಕೊಠಡಿ, ಸಿಮ್ಸ್, ಶಿವಮೊಗ್ಗ 27/09/2022 ಬೆಳಿಗ್ಗೆ 12:00 |
| 8 | ಟೆಂಡರ್‌ನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ ಮೊತ್ತ (ರೂ. ಗಳಲ್ಲಿ) | 10,000/- (ಹತ್ತು ಸಾವಿರ ಮಾತ್ರ) |
| 9 | ಟೆಂಡರ್ ಸ್ವೀಕರಿಸುವ ಪ್ರಾಧಿಕಾರ, ವ್ಯವಹರಿಸಬೇಕಾದ ಅಧಿಕಾರಿ ಹಾಗೂ ವಿಳಾಸ, ದೂರವಾಣಿ ಸಂಖ್ಯೆ | ನಿರ್ದೇಶಕರು, ಸಿಮ್ಸ್, ಶಿವಮೊಗ್ಗ ದೂ.ಸಂ: 08182-229933 |

ನಿರ್ದೇಶಕರು
ಶಿವಮೊಗ್ಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಶಿವಮೊಗ್ಗ

**ಟೆಂಡರ್ ದಾಖಲೆಗಳು ಮತ್ತು ಟೆಂಡರ್‌ದಾರರಿಗೆ ಸೂಚನೆಗಳು :-**

**1. ಟೆಂಡರ್ ಉದ್ದೇಶ :-**

ಶಿವಮೊಗ್ಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ವೈದ್ಯಕೀಯ ಅಧೀಕ್ಷಕರು ಇವರಿಗೆ ಅವಶ್ಯವಿರುವಂತೆ ಹೊರಗುತ್ತಿಗೆ ಆಧಾರದ ಮೇಲೆ ವಾಹನ ಸೇವೆಯನ್ನು ಪಡೆಯಲು ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ.

| ಕ್ರ.ಸಂ. | ವಾಹನ ನೀಡಬೇಕಾದ ವಿಭಾಗ ಹೆಸರು | ವಾಹನದ ಮಾದರಿ | ಗರಿಷ್ಠ ಮೊತ್ತ 2500 ಕೀ.ಮಿ ವರೆಗೆ | 2500 ಕೀ.ಮಿ ನಂತರದ ಪ್ರತಿ ಕೀ.ಮಿ ಗೆ | 300 ಗಂಟೆಗಳ ನಂತರ ಪ್ರತಿ ಗಂಟೆಗೆ |
|---|---|---|---|---|---|
| 1 | ಕಮ್ಯೂನಿಟಿ ಮೆಡಿಸಿನ್ ವಿಭಾಗಕ್ಕೆ | ಹವ ನಿಯಂತ್ರಿತ (ಎಸಿ) ಕನಿಷ್ಠ 4+1 ಆಸನದ ವ್ಯವಸ್ಥೆಯುಳ್ಳ ಅಥವಾ ಅದಕ್ಕಿಂತ ಹೆಚ್ಚಿನ ಸಾಮರ್ಥ್ಯವಿರುವ 2020 ರ ಹಾಗೂ ನಂತರದ SUV ( Sport Utility Vehicle) ಮಾದರಿಯ ವಾಹನ ಅಥವಾ ತತ್ಸಮಾನ ವಾಹನ | ರೂ. 40000/- + Tax | ರೂ.12 /- + Tax | ರೂ.150.00/- + Tax |

**<u>ಟೆಂಡರ್ ದಾಖಲೆಗಳು ಮತ್ತು ಸೂಚನೆಗಳು :</u>**

1. ಟೆಂಡರ್‌ದಾರರು ತಾಂತ್ರಿಕ ಲಕೋಟೆಯಲ್ಲಿ (ಟೆಂಡರ್ ಅರ್ಜಿ ನಮೂನೆ - 1 ) ಸಲ್ಲಿಸಬೇಕಾದ ದಾಖಲೆಗಳು :
   a. ಇ.ಎಂ.ಡಿ ಬಾಬ್ತು ರೂ. 10,000/-ಗಳಿಗೆ ನಿರ್ದೇಶಕರು, ಶಿವಮೊಗ್ಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಶಿವಮೊಗ್ಗರವರ ಹೆಸರಿನಲ್ಲಿ ರಾಷ್ಟ್ರೀಕೃತ ಬ್ಯಾಂಕಿನಿಂದ ಪಡೆದು ಡಿ.ಡಿ ಸಲ್ಲಿಸಬೇಕು.
   b. ಸಾರಿಗೆ ಇಲಾಖೆಯಿಂದ ವಾಹನ ಓಡಿಸಲು ಅಥವಾ ಬಾಡಿಗೆ ಆಧಾರದ ಮೇಲೆ ವಾಹನ ನೀಡಲು ನೀಡಿದ ಪರವಾನಿಗೆ ಪತ್ರ ಸಲ್ಲಿಸಬೇಕು.
   c. ಟೆಂಡರ್‌ದಾರರು ಆದಾಯ ತೆರಿಗೆ, ಪಾನ್‌ಕಾರ್ಡ್ ಹೊಂದಿರಬೇಕು, ಅದರ ದೃಢೀಕೃತ ಪ್ರತಿ ಸಲ್ಲಿಸಬೇಕು.
   d. ಟ್ರಾವೆಲ್ ಏಜೆನ್ಸಿಯಾಗಿದ್ದರೆ ಅದರ ವಿಳಾಸದ ದೃಢೀಕರಣ ಪತ್ರ ಸಲ್ಲಿಸಬೇಕು.
   e. ಪ್ರವಾಸೋದ್ಯಮ ಇಲಾಖೆ/ಸಾರಿಗೆ ಇಲಾಖೆಗಳಲ್ಲಿ ನೊಂದಣಿಯಾದ ಬಗ್ಗೆ ದೃಢೀಕರಣ ಪತ್ರಗಳ ಪ್ರತಿಗಳು ಸಲ್ಲಸಬೇಕು.
   f. ಚುನಾಯಿತ ಸದಸ್ಯರು, ಕಪ್ಪುಪಟ್ಟಿಯಲ್ಲಿರುವ ಸಂಸ್ಥೆಯವರು ಟೆಂಡರ್‌ನಲ್ಲಿ ಭಾಗವಹಿಸಲು ಅವಕಾಶವಿರುವುದಿಲ್ಲ. ಟೆಂಡರ್‌ದಾರರು ಕಪ್ಪುಪಟ್ಟಿಗೆ ಸೇರಿರದೆ ಇರುವ ಬಗ್ಗೆ ಮತ್ತು ಚುನಾಯಿತ ಪ್ರತಿನಿಧಿ ಅಲ್ಲದೆ ಇರುವ ಬಗ್ಗೆ 100 ರೂಗಳ ಛಾಪಾ ಕಾಗದದಲ್ಲಿ ಅಫಿಡವಿಟ್ ಸಲ್ಲಿಸುವುದು.
   g. ಟೆಂಡರ್‌ದಾರರು ವಾಹನದ ಈ ಕೆಳಕಂಡ ದಾಖಲೆಗಳ ದೃಢೀಕೃತ ಪ್ರತಿಗಳನ್ನು ಸಲ್ಲಿಸಬೇಕು.
      - ಆರ್.ಸಿ ಪುಸ್ತಕ
      - ವಾಹನದ ಮತ್ತು ಚಾಲಕರ ವಿಮೆಯ ಪ್ರತಿ
      - ಚಾಲಕರ ಚಾಲನಾ ಪರವಾನಿಗೆ ಪತ್ರ, ಪಿ.ವಿ ಬ್ಯಾಡ್ಜ್ ಪ್ರತಿ
      - ವಾಹನ ತೆರಿಗೆ ಬಾಬ್ತು ಪಾವತಿಸಿದ ಬಗ್ಗೆ ದಾಖಲೆಗಳ ಪ್ರತಿ
      - ಹಳದಿ ಬೋರ್ಡ್ ಹೊಂದಿರುವ ಬಗ್ಗೆ ದಾಖಲೆಗಳ ಪ್ರತಿ

   e. ಒಂದು ವೇಳೆ ಸದರಿ ಟೆಂಡರ್ ನಲ್ಲಿ ಎಲ್ 1 ಆದವರು ಒದಗಿಸುವ ವಾಹನವು 2020 ರ ನಂತರದ ವಾಹನವು ಆಗಿದ್ದರು ಸಹ ಅಧಿಕಾರಿಗಳು ಬಳಸಲು ಯೋಗ್ಯವಿಲ್ಲದಿದ್ದಲ್ಲಿ ಅಥವಾ ಸುಸ್ಥಿತಿಯಲ್ಲಿ ಇಲ್ಲದಿದ್ದಲ್ಲಿ ಅಂತಹ ವಾಹನಗಳನ್ನು ಆಯ್ಕೆಗೆ ಪರಿಗಣಿಸುವುದಿಲ್ಲ. ಹಾಗೂ ಸದರಿ ಟೆಂಡರ್ ನಲ್ಲಿ 2020 ರ ನಂತರ ತಯಾರಿಕೆಯಾದ ವಾಹನಗಳು ಭಾಗವಹಿಸದಿದ್ದಲ್ಲಿ ಮಾತ್ರ 2020 ಕ್ಕಿಂತ ಮುಂಚಿತವಾಗಿ ಅಂದರೆ ಮೊದಲ ಆದ್ಯತೆ 2019 ರ ನಂತರ ತಯಾರಿಕೆಯಾದ ಸುಸ್ಥಿತಿ ವಾಹನಗಳಿಗೆ, ತದನಂತರ 2018 ರ ನಂತರ ತಯಾರಿಕೆಯಾದ ಸುಸ್ಥಿತಿ ವಾಹನಗಳನ್ನು ಟೆಂಡರ್ ನಲ್ಲಿ ಪರಿಗಣಿಸಲಾಗುವುದು. ಇದನ್ನು ಪರಿಗಣಿಸುವುದು ಅಥವಾ ತಿರಸ್ಕರಿಸುವ ನಿರ್ಧಾರ ಸಂಸ್ಥೆಯ ನಿರ್ದೇಶಕರ ಅಂತಿಮ ತೀರ್ಮಾನವಾಗಿರುತ್ತದೆ.

ಟೆಂಡರ್‌ದಾರರು ಸಲ್ಲಿಸಿರುವ ದಾಖಲಾತಿಗಳ ಮೂಲ ಪ್ರತಿಗಳನ್ನು ಪರಿಶೀಲನೆಗೆ ಅವಶ್ಯವೆಂದು ಕಂಡುಬಂದಲ್ಲಿ ಕಛೇರಿಗೆ ಹಾಜರುಪಡಿಸಬೇಕು.

**2. ಟೆಂಡರ್‌ದಾರರು:**

ಟೆಂಡರ್‌ದಾರರು ಯಾವುದೇ ಕಾನೂನಿನ ಅಡಿಯಲ್ಲಿ ಅವ್ಯವಹಾರಗಳ ಬಗ್ಗೆ ಅನರ್ಹರೆಂದು ಪರಿಗಣಿಸಿರಬಾರದು. ಟೆಂಡರ್‌ದಾರರಿಗೆ ಇರಬೇಕಾದ ಅರ್ಹತೆಗಳ ಬಗ್ಗೆ ವಿವರಗಳನ್ನು ಈ ಟೆಂಡರ್‌ನ ದಸ್ತಾವೇಜು ದಾಖಲೆಗಳಲ್ಲಿ ಟೆಂಡರ್‌ದಾರರಿಗೆ ನೀಡಿದೆ. ಈ ಬಗ್ಗೆ ಯಾವುದೇ ವಿಷಯಗಳ ಬಗ್ಗೆ ಸ್ಪಷ್ಟೀಕರಣದ ವಿಷಯವನ್ನು ಲಿಖಿತವಾಗಿ ನೀಡಿ ಟೆಂಡರ್ ಕರೆದಿರುವ ಪ್ರಾಧಿಕಾರದಿಂದ ಮಾಹಿತಿ ಪಡೆಯಬಹುದು.

**3. ಟೆಂಡರ್ ದಾಖಲೆಗಳ ತಿದ್ದುಪಡಿ :**

ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕಕ್ಕೆ ಮುನ್ನ ಈ ಬಗ್ಗೆ ಇರುವ ಟೆಂಡರ್ ದಾಖಲೆಗಳನ್ನು ತಿದ್ದುಪಡಿ ಮಾಡುವ/ಬದಲಾಯಿಸುವ ಅಧಿಕಾರ ಟೆಂಡರ್ ಪ್ರಾಧಿಕಾರ ಹೊಂದಿದೆ. ಈ ರೀತಿ ಯಾವುದೇ ತಿದ್ದುಪಡಿಗಳನ್ನು ಮಾಡಿದಲ್ಲಿ ಅದನ್ನು ಸಂಬಂಧಿಸಿದ ಟೆಂಡರ್‌ದಾರರಿಗೆ ತಿಳಿಸಲಾಗುವುದು.

**4. ಟೆಂಡರ್ ಜೊತೆಗೆ ಸಲ್ಲಿಸಬೇಕಾದ ದಾಖಲೆಗಳು :**

ದ್ವಿ-ಲಕೋಟೆ ಪದ್ಧತಿಯಲ್ಲಿ ಟೆಂಡರ್‌ನ್ನು ಆಹ್ವಾನಿಸಿದ್ದು, 1ನೇ ಲಕೋಟೆಯಲ್ಲಿ ಟೆಂಡರ್ ಅರ್ಜಿ ಮತ್ತು ದಾಖಲಾತಿ ವಿವರಗಳನ್ನು ಹಾಕಿ ಅದರ ಮೇಲೆ ಕಮ್ಯೂನಿಟಿ ಮೆಡಿಸಿನ್ ವಿಭಾಗಕ್ಕೆ, ಶಿವಮೊಗ್ಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಶಿವಮೊಗ್ಗ ಇವರಿಗೆ ಮಾಸಿಕ ಆಧಾರದ ಮೇಲೆ ವಾಹನವನ್ನು ಬಾಡಿಗೆಗೆ ಪಡೆಯುವ ಟೆಂಡರ್‌ನ ತಾಂತ್ರಿಕ ಲಕೋಟೆ ಎಂದು ನಮೂದಿಸಬೇಕು.

'ಆರ್ಥಿಕ ಬಿಡ್‌ಗಳನ್ನು ಪ್ರತ್ಯೇಕ ಕವರ್‌ನಲ್ಲಿ ಅಡಕವಿರಿಸಿ' ಅದರ ಕಮ್ಯೂನಿಟಿ ಮೆಡಿಸಿನ್ ವಿಭಾಗಕ್ಕೆ, ಶಿವಮೊಗ್ಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಶಿವಮೊಗ್ಗ ಮಾಸಿಕ ಆಧಾರದ ಮೇಲೆ ವಾಹನವನ್ನು ಬಾಡಿಗೆಗೆ ಪಡೆಯುವ ಟೆಂಡರ್‌ನ ಆರ್ಥಿಕ ಲಕೋಟೆ ಎಂದು ನಮೂದಿಸಬೇಕು.

**5. ಆರ್ಥಿಕ ಬಿಡ್‌ನಲ್ಲಿ (ಟೆಂಡರ್ ಅರ್ಜಿ ನಮೂನೆ - 1 ) ಸಲ್ಲಿಸಬೇಕಾದ ವಿವರಗಳು:**

ಆರ್ಥಿಕ ಬಿಡ್‌ನಲ್ಲಿ ನಮೂದಿಸಿರುವಂತೆ ನಿಗಧಿತ ಕಾಲಂಗಳಲ್ಲಿ ಟೆಂಡರ್ ದರವನ್ನು ರೂಪಾಯಿ ಸಂಖ್ಯೆಯಲ್ಲಿ ಮತ್ತು ಅಕ್ಷರದಲ್ಲಿ ನಮೂದಿಸಿ ಸಲ್ಲಿಸಬೇಕು. ಆರ್ಥಿಕ ಟೆಂಡರ್‌ನಲ್ಲಿ ಅತೀ ಕಡಿಮೆ ವೆಚ್ಚವನ್ನು ನಮೂದಿಸಿದ ಟೆಂಡರ್‌ದಾರರು ಯಶಸ್ವಿ ಟೆಂಡರ್‌ದಾರರಾಗುತ್ತಾರೆ.

**6. ಇ.ಎಂ.ಡಿ ಮೊತ್ತ:**

ಟೆಂಡರ್‌ದಾರರು ಟೆಂಡರ್ ಫಾರಂ ಜೊತೆ ಇ.ಎಂ.ಡಿ ಬಾಬ್ತು ರೂ. 10,000/- ಗಳಿಗೆ ನಿರ್ದೇಶಕರು, ಶಿವಮೊಗ್ಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಶಿವಮೊಗ್ಗರವರ ಹೆಸರಿಗೆ ರಾಷ್ಟ್ರೀಕೃತ ಬ್ಯಾಂಕಿನಿಂದ ಪಡೆದು ಸಲ್ಲಿಸಬೇಕು.

• ಟೆಂಡರ್ ಫಾರಂ ಜೊತೆ ಇ.ಎಂ.ಡಿ ಸಲ್ಲಿಸದೆ ಇರುವ ಟೆಂಡರ್‌ಗಳನ್ನು ತಿರಸ್ಕರಿಸಲಾಗುವುದು.

• ಯಶಸ್ವಿ ಟೆಂಡರ್‌ದಾರರು, ಕಾರ್ಯಾದೇಶ ಪಡೆದ ನಂತರ ಈ ಬಗ್ಗೆ 07 ದಿನಗಳ ಅವಧಿಯಲ್ಲಿ ಭದ್ರತಾ ನಿರ್ವಹಣಾ ಠೇವಣಿ ಟೆಂಡರ್‌ಗಿಟ್ಟ ಮೊತ್ತದ ಶೇ.5 ರಷ್ಟು ಅಂದರೆ ರೂ. 24,000/- ನ್ನು ನೀಡಿ ಕರಾರು ಮಾಡಿಕೊಳ್ಳದೆ ಇದ್ದಲ್ಲಿ ಇ.ಎಂ.ಡಿ ಬಾಬ್ತನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು ಹಾಗೂ ಟೆಂಡರ್ ಷರತ್ತುಗಳನ್ನು ಉಲ್ಲಂಘನೆ ಮಾಡಿದ ಸಂದರ್ಭದಲ್ಲಿ ಸಹ ಕಾರ್ಯಾದೇಶ ರದ್ದುಪಡಿಸಿ, ಭದ್ರತಾ ನಿರ್ವಹಣಾ ಠೇವಣಿ ಮತ್ತು ಇ.ಎಂ.ಡಿ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

• ಯಶಸ್ವಿಯಾಗದ ಟೆಂಡರ್‌ದಾರರ ಇ.ಎಂ.ಡಿ ಯನ್ನು ಯಶಸ್ವಿ ಬಿಡ್‌ದಾರರಿಗೆ ಕಾರ್ಯಾದೇಶ ನೀಡಿದ ನಂತರ ಬಡ್ಡಿ ರಹಿತವಾಗಿ ಹಿಂತಿರುಗಿಸಲಾಗುವುದು. ಯಶಸ್ವಿ ಬಿಡ್‌ದಾರರಿಗೆ ಕಾರ್ಯಾದೇಶದ ಅವಧಿಯ ಅಂತ್ಯದವರೆಗೆ ಯಾವುದೇ ಕಾರಣಕ್ಕೂ ಕಾರ್ಯಾಧಾರಿತ ಭದ್ರತಾ ಮೊತ್ತವನ್ನು ಹಿಂದಿರುಗಿಸಲಾಗುವುದಿಲ್ಲ.

• ಇಲಾಖೆಯಲ್ಲಿರುವ ಅವಧಿಗೆ ಇ.ಎಂ.ಡಿ ಮೊತ್ತಕ್ಕೆ ಯಾವುದೇ ಬಡ್ಡಿಯನ್ನು ನೀಡಲಾಗುವುದಿಲ್ಲ.

**7. ಕಾರ್ಯಾಧಾರಿತ ಭದ್ರತೆ :-**

ಯಶಸ್ವಿ ಟೆಂಡರ್‌ದಾರರು ಟೆಂಡರ್‌ಗಿಟ್ಟ ಮೊತ್ತದ ಶೇಕಡಾ 5%ರಷ್ಟು ಅಂದರೆ ರೂ. 24,000/-ಗಳಿಗೆ ಕಾರ್ಯಾಧಾರಿತ ಭದ್ರತೆಯನ್ನು ಬ್ಯಾಂಕ್ ಗ್ಯಾರಂಟಿ ಮೂಲಕ ಒದಗಿಸಬೇಕು. ಈ ಮೊತ್ತಕ್ಕೆ ಬ್ಯಾಂಕ್ ಗ್ಯಾರಂಟಿಯನ್ನು ಕಾರ್ಯಾದೇಶ ನೀಡಿದ 7 ದಿನಗಳ ಒಳಗಾಗಿ ಮತ್ತು ಕರಾರು ಒಪ್ಪಂದಕ್ಕೆ ಸಹಿ ಮಾಡುವ ಮುನ್ನಾ ಒದಗಿಸಬೇಕು. ಬ್ಯಾಂಕ್ ಗ್ಯಾರಂಟಿ ಅವಧಿಯು ಕಾರ್ಯಾದೇಶದ ದಿನಾಂಕದಿಂದ ಒಂದು ವರ್ಷ ಚಾಲ್ತಿ ಅವಧಿ ಹೊಂದಿರಬೇಕು.

**8. ಟೆಂಡರ್ ತೆರೆಯುವುದು ಮತ್ತು ಮೌಲ್ಯಮಾಪನ ಮಾಡುವುದು :-**

ಟೆಂಡರ್ ತೆರೆದು ತಾಂತ್ರಿಕವಾಗಿ ಅರ್ಹವಾಗಿರುವ ಬಿಡ್‌ದಾರರ ಹಣಕಾಸು ಬಿಡ್‌ಗಳನ್ನು ಮಾತ್ರ ತೆರೆದು ಮೌಲ್ಯಮಾಪನ ಮಾಡಿ ನಿಯಮಾನುಸಾರ ಅರ್ಹ ಟೆಂಡರ್‌ದಾರರನ್ನು ಆಯ್ಕೆ ಮಾಡಲಾಗುವುದು.

1. ತಾಂತ್ರಿಕ ಬಿಡ್ ತೆರೆದು ಟೆಂಡರ್ ನಿಬಂಧನೆಗಳು ಮತ್ತು ಟೆಂಡರ್‌ದಾರರು ಒದಗಿಸುವ ದಾಖಲಾತಿಗಳನ್ನು ಪರಿಶೀಲಿಸಿ ಮೌಲ್ಯಮಾಪನ ಮಾಡಲಾಗುವುದು.

2. ಎಲ್ಲಾ ರೀತಿಯಲ್ಲೂ ಸರಿಯಾಗಿರುವ ತಾಂತ್ರಿಕ ಬಿಡ್ ಮಾತ್ರ ಒಪ್ಪಿಕೊಂಡು ಅವುಗಳಿಗೆ ಸಂಬಂಧಿಸಿದಂತೆ ಆರ್ಥಿಕ ಲಕೋಟೆಗಳನ್ನು ನಿಗಧಿತ ದಿನಾಂಕದಂದು ಹಾಜರಾಗುವ ಟೆಂಡರ್‌ದಾರರ ಸಮಕ್ಷಮದಲ್ಲಿ ತೆರೆಯಲಾಗುವುದು

**9. ಟೆಂಡರ್ ಅವಾರ್ಡ್ ಮಾಡುವುದು :-**

1. ಆರ್ಥಿಕ ಬಿಡ್‌ನಲ್ಲಿ ಹೇಳಿರುವ ಅಂಶದ ಮೇಲೆ ಅತೀ ಕಡಿಮೆ ದರವನ್ನು ನಮೂದಿಸಿದ ಟೆಂಡರ್‌ದಾರರನ್ನು ಯಶಸ್ವಿ ಟೆಂಡರ್‌ದಾರರೆಂದು ಪರಿಗಣಿಸಿ ಅವರಿಗೆ ಕಾರ್ಯಾದೇಶ ನೀಡಲಾಗುವುದು, ಅವಶ್ಯವಿದ್ದಲ್ಲಿ ಈ ಕಡಿಮೆ ದರ ನಮೂದಿಸಿದ ಟೆಂಡರ್‌ದಾರರೊಡನೆ ದರ ನಿಗಧಿಗಾಗಿ ನೆಗೋಷಿಯೇಷನ್ ಮಾಡಲು ಟೆಂಡರ್ ಕರೆದಿರುವ ಪ್ರಾಧಿಕಾರಕ್ಕೆ ಅಧಿಕಾರವಿರುತ್ತದೆ.

2. ಟೆಂಡರ್‌ಗಳ ಆರ್ಥಿಕ ಲಕೋಟೆಗಳನ್ನು ತೆರೆದ ನಂತರ ಒಪ್ಪುವ ಅಥವಾ ತಿರಸ್ಕರಿಸುವ ಅಧಿಕಾರ ಟೆಂಡರ್ ಕರೆದಿರುವ ಪ್ರಾಧಿಕಾರ ಹೊಂದಿರುತ್ತದೆ.

3. ಟೆಂಡರ್ ಅವಧಿಯು ಕಾರ್ಯಾದೇಶ ನೀಡಿದಾಗಿನಿಂದ ಒಂದು ವರ್ಷದ ಅವಧಿಗೆ ಅಥವಾ 2022-23ನೇ ಸಾಲಿನ ಆರ್ಥಿಕ ವರ್ಷದ ಅಂತ್ಯದವರೆಗೆ/ಇಲಾಖೆ ತಿಳಿಸಿರುವ ಅವಧಿಯವರೆಗೆ ಸೇವೆ ಒದಗಿಸಬೇಕು.

4. ಟೆಂಡರ್ ಕರೆದ 90 ದಿನಗಳಲ್ಲಿ ಕಾರ್ಯಾದೇಶ ನೀಡದಿದ್ದಲ್ಲಿ ಅಥವಾ ಒಂದು ವೇಳೆ ಟೆಂಡರ್‌ದಾರರು ಲಿಖಿತ ಒಪ್ಪಿಗೆ ನೀಡಿರುದರ ಮೇರೆಗೆ ವಿಸ್ತರಿಸಿದ ಅವಧಿಯಲ್ಲಿ ಕಾರ್ಯಾದೇಶ ನೀಡದಿದ್ದಲ್ಲಿ ತಂತಾನೆ ಟೆಂಡರ್ ರದ್ದಾಗುತ್ತದೆ.

**10. ಟೆಂಡರ್ ಗುತ್ತಿಗೆಯ ಕರಾರು ಒಪ್ಪಂದವನ್ನು ಸಹಿ ಮಾಡುವುದು :**

ಯಶಸ್ವಿ ಟೆಂಡರ್‌ದಾರರಿಗೆ ಕಾರ್ಯಾದೇಶ ನೀಡಲಾಗುವುದು, ಕಾರ್ಯಾದೇಶ ಪಡೆದ ನಂತರ 7 ದಿನಗಳೊಳಗಾಗಿ ರೂ. 100/-ರ ಛಾಪಾ ಕಾಗದದಲ್ಲಿ ಇಲಾಖೆಯೊಂದಿಗೆ ನಿಗಧಿತ ನಮೂನೆಯಲ್ಲಿ ಟೆಂಡರ್ ನಿಬಂಧನೆಗಳೊಂದಿಗೆ ಹಾಗೂ ಪ್ರತ್ಯೇಕವಾಗಿ ವಿಧಿಸಬಹುದಾದ ಷರತ್ತುಗಳನ್ನೊಳಗೊಂಡ ಕರಾರು ಪತ್ರಕ್ಕೆ ಸಹಿ ಮಾಡತಕ್ಕದ್ದು. ಕರಾರು ಒಪ್ಪಂದ ಪತ್ರಕ್ಕೆ ಸಹಿ ಹಾಕಲು ಮತ್ತು ಕಾರ್ಯಾಧಾರಿತ ಭದ್ರತಾ ಮೊತ್ತ ನೀಡಲು ವಿಫಲರಾದಲ್ಲಿ ಇ.ಎಂ.ಡಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಂಡು ಕಾರ್ಯಾದೇಶವನ್ನು ರದ್ದುಪಡಿಸಲಾಗುವುದು.

**11. ದರ :**

1. ಪ್ರತಿ ಮಾಹೆ 2500 ಕಿ.ಮೀಟರ್‌ಗಳಿಗೆ ಗರಿಷ್ಠ ರೂ. 40000/-ಗಳನ್ನು ನಿಗಧಿಪಡಿಸಿದೆ.
2. 2500 ಕಿ.ಮೀ ಗಳಿಗಿಂತ ಹೆಚ್ಚಿಗೆ ವಾಹನ ಓಡಿದಲ್ಲಿ ಟೆಂಡರ್‌ನಲ್ಲಿ ಅನುಮೋದಿತ ದರಗಳಂತೆ ಪಾವತಿಸಲಾಗುವುದು.
3. ಟೆಂಡರ್‌ನಲ್ಲಿ ನಮೂದಿಸುವ ದರಗಳು, ಇಂಧನ ವೆಚ್ಚ, ಚಾಲಕರಿಗೆ ಪಾವತಿಸಬೇಕಾದ ಕನಿಷ್ಠ ವೇತನ, ಪಿ.ಎಫ್, ಇ.ಎಸ್.ಐ ಹಾಗೂ ಇತರೆ ಭತ್ಯೆಗಳು ಮತ್ತು ವಾಹನ ನಿರ್ವಹಣಾ ವೆಚ್ಚ, ಸಾರಿಗೆ, ಶಾಸನ ಬದ್ಧ ಇತರ ಕಾರ್ಮಿಕ ಇಲಾಖೆ, ಸ್ಥಳೀಯ ಸಂಸ್ಥೆಗಳು ಮುಂತಾದ ಇಲಾಖೆಗಳು ವಿಧಿಸಬಹುದಾದ ತೆರಿಗೆಗಳು, ಸೇವಾ ತೆರಿಗೆ, ಸೇವಾ ವೆಚ್ಚ, ವಾಹನದ ವಿಮೆ ಮತ್ತು ಇತರೆ ವಿಮೆ ಹಾಗೂ ವಾಹನ ನಿಲುಗಡೆ ಶುಲ್ಕ ಮತ್ತು ಇತರೆ ಎಲ್ಲಾ ಶುಲ್ಕಗಳನ್ನು ಒಳಗೊಂಡಿರಬೇಕು. ಸದರಿ ಸಂಸ್ಥೆಯಿಂದ ಪ್ರತ್ಯೇಕ ವೆಚ್ಚ/ ತೆರಿಗೆಗಳನ್ನು ನೀಡುವುದಿಲ್ಲ.
4. ಸರ್ಕಾರದ ಆದೇಶಾನುಸಾರ ಕಾಲಕಾಲಕ್ಕೆ ಪಾವತಿಸಬೇಕಾದ ಸೇವಾ ತೆರಿಗೆ, ಆದಾಯ ತೆರಿಗೆ ಮುಂತಾದ ತೆರಿಗೆ / ವೆಚ್ಚಗಳನ್ನು ಸಂಸ್ಥೆಯಿಂದ ಪಾವತಿಸುವ ಮಾಸಿಕ ಬಾಡಿಗೆಯಲ್ಲಿ ಕಟಾಯಿಸಿ ಸರ್ಕಾರಕ್ಕೆ ಜಮೆ ಮಾಡಲಾಗುವುದು. ಇದಕ್ಕೆ ಟೆಂಡರ್‌ದಾರರು ಬದ್ಧರಾಗಿರಬೇಕು.

**12. ದಂಡಗಳು :**

1. ಕಾರ್ಯಾದೇಶ ಪಡೆದ 7 ದಿನಗಳ ಒಳಗೆ ವಾಹನವನ್ನು ಒದಗಿಸಲು ವಿಫಲರಾದಲ್ಲಿ ಪ್ರತಿ ಮಾಹೆ ನಿಗಧಿಪಡಿಸಿದ ಮಾಸಿಕ ಬಾಡಿಗೆಯ ದರದ ಶೇಕಡಾ 1/2 ರಂತೆ (ಪ್ರತಿ ವಾರಕ್ಕೆ) ದಂಡ ವಿಧಿಸಲಾಗುವುದು. ಗರಿಷ್ಠ ಶೇ. 10 ರಷ್ಟು ವಿಧಿಸಲಾಗುವುದು.

2. ಒಂದು ವೇಳೆ ಟೆಂಡರ್ ಅವಧಿಯಲ್ಲಿ ಯಾವುದಾದರೂ ಒಂದು ದಿನ ವಾಹನವನ್ನು ಒದಗಿಸದೇ ಇದ್ದಲ್ಲಿ ಪ್ರತಿ ದಿನಕ್ಕೆ ರೂ. 500/-ಗಳಂತೆ ದಂಡ ವಿಧಿಸಲಾಗುವುದು. ಈ ಮೊತ್ತವನ್ನು ಟೆಂಡರ್‌ದಾರರಿಗೆ ಪಾವತಿಸುವ ಮಾಸಿಕ ಬಾಡಿಗೆಯಲ್ಲಿ ಕಟಾಯಿಸಲಾಗುವುದು.

3. ಕರ್ತವ್ಯದ ವೇಳೆಯಲ್ಲಿ ತಾತ್ಕಾಲಿಕ ಗೈರು ಹಾಜರಿಯಾದಲ್ಲಿ ಪ್ರತಿ ಗಂಟೆಗೆ ರೂ. 200/-ಗಳ ದಂಡವನ್ನು ವಿಧಿಸಲಾಗುವುದು.

## 13. ಹಣ ಪಾವತಿ ವಿವರ :-

1. ಟೆಂಡರ್‌ದಾರರು ಪ್ರತಿ ಮಾಹೆ 5ನೇ ದಿನಾಂಕದೊಳಗಾಗಿ ಟ್ರಿಪ್‌ಶೀಟ್/ಲಾಗ್ ಪುಸ್ತಕಗಳ ನಕಲು ಪ್ರತಿಯೊಂದಿಗೆ ದ್ವಿಪ್ರತಿಯಲ್ಲಿ ಬಿಲ್ಲುಗಳನ್ನು ಸಂಬಂಧಿಸಿದ ಮೇಲಾಧಿಕಾರಿಗಳಿಂದ ಧೃಢೀಕರಿಸಿ ನಿರ್ದೇಶಕರು, ಶಿವಮೊಗ್ಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಶಿವಮೊಗ್ಗರವರಿಗೆ ಸಲ್ಲಿಸುವುದು, ನಂತರ ಅವುಗಳನ್ನು ಪರಿಶೀಲಿಸಿ ನಿಯಮಾನುಸಾರ ಬಿಲ್ಲನ್ನು ಪಾವತಿಸಲು ಕ್ರಮವಹಿಸಲಾಗುವುದು.

2. ಅನುದಾನದ ಕೊರತೆ / ಇತರೆ ಆಡಳಿತಾತ್ಮಕ ಕಾರಣಗಳಿಂದ ಬಿಲ್ಲುಗಳನ್ನು ಪಾವತಿಸಲು ವಿಳಂಬವಾದರೂ ಸಹ ವಾಹನವನ್ನು ಸೇವೆಯನ್ನು ಒದಗಿಸಬೇಕು.

## 14. ಚಾಲಕರಿಗೆ ಪಾವತಿಸಬೇಕಾದ ವೇತನ ಮತ್ತು ಇತರೆ ಭತ್ಯೆಗಳು:

a. ವಾಹನ ಚಾಲಕರು ವಾಹನದ ಮಾಲೀಕರ ಅಧೀನಕ್ಕೆ ಒಳಪಟ್ಟಿದ್ದು, ವಾಹನಚಾಲಕರ ಸಂಬಳ, ಭತ್ಯೆ, ಪಿ.ಎಫ್, ಇ.ಎಸ್.ಐ ಮುಂತಾದ ಸೌಲಭ್ಯಗಳನ್ನು ವಾಹನದ ಮಾಲಿಕರು ನೀಡಬೇಕು ಮತ್ತು ಚಾಲಕರಿಗೆ ಸರ್ಕಾರದ ಕಾರ್ಮಿಕ ಕನಿಷ್ಠ ವೇತನ ಕಾಯ್ದೆಯಂತೆ ವೇತನವನ್ನು ಪಾವತಿಸುವುದು. ಕನಿಷ್ಠ ವೇತನ ಪಾವತಿಸಲು ವಿಫಲರಾದಲ್ಲಿ ಈ ಬಗ್ಗೆ ಕಾರ್ಮಿಕ ಇಲಾಖೆ ವಿಧಿಸಬಹುದಾದ ದಂಡನೆಗಳಿಗೆ ಮಾಲಿಕರೆ ಜವಾಬ್ದಾರರಾಗಿರುತ್ತಾರೆ.

b. ಕಾರ್ಮಿಕರ ಭವಿಷ್ಯನಿಧಿ ಕಾಯ್ದೆ, ಕಾರ್ಮಿಕರ ವಿಮಾ ಕಾಯ್ದೆ ಹಾಗೂ ಇತರೆ ಕಾರ್ಮಿಕ ಕಲ್ಯಾಣ ಕಾಯ್ದೆಗಳ ಪ್ರಕಾರ ಚಾಲಕರಿಗೆ ಒದಗಿಸಬೇಕಾದ ಸೌಲಭ್ಯಗಳನ್ನು ಮಾಲಿಕರು ಕಲ್ಪಿಸಬೇಕು. ಈ ಸೌಲಭ್ಯಗಳನ್ನು ಒದಗಿಸಲು ಮಾಲಿಕರು ವಿಫಲರಾದಲ್ಲಿ, ಅವರ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸಲಾಗುವುದು.

c. ವಾಹನದ ಮಾಲಿಕರು ಪಾವತಿಸಬೇಕಾದ ಶಾಸನಬದ್ಧ ಜವಾಬ್ದಾರಿಗಳನ್ನು ನಿರ್ವಹಿಸಲು ವಿಫಲರಾದಲ್ಲಿ ಅವರಿಗೆ ಇಲಾಖೆಯಿಂದ ಪಾವತಿಸಬೇಕಾದ ಮೊತ್ತದಲ್ಲಿ ಕಟಾಯಿಸಿ, ಸಂಬಂಧಿಸಿದ ಇಲಾಖೆಗಳಿಗೆ ಜಮೆ ಮಾಡಲಾಗುವುದು ಇದಕ್ಕೆ ವಾಹನದ ಮಾಲಿಕರು ಬದ್ಧರಾಗಿರಬೇಕು.

## 15. ವಿಮೆ :-

a. ವಾಹನವು ವಿಮೆಗೆ ಒಳಪಟ್ಟಿರಬೇಕು ಮತ್ತು ವಾಹನದ ಚಾಲಕರು ಹಾಗೂ ಪ್ರಯಾಣಿಕರು ಸಹ ವಿಮಾ ವ್ಯಾಪ್ತಿಗೆ ಒಳಪಟ್ಟಿರಬೇಕು. ಈ ಸಂಬಂಧದ ಪ್ರಮಾಣ ಪತ್ರಗಳನ್ನು ಇಲಾಖೆಗೆ ಒದಗಿಸಬೇಕು.

b. ಕಾಲಕಾಲಕ್ಕೆ ವಿಮೆಗಳನ್ನು ನವೀಕರಿಸುವುದು ಮಾಲಿಕರ ಜವಾಬ್ದಾರಿಯಾಗಿರುತ್ತದೆ.

## 16. ಟೆಂಡರ್‌ದಾರರಿಗೆ ಸೂಚನೆ, ಷರತ್ತುಗಳು ಹಾಗೂ ಜವಾಬ್ದಾರಿಗಳು :-

01. ಏಜೆನ್ಸಿಯು ಸಾರಿಗೆ ಇಲಾಖೆ/ಪ್ರವಾಸೋದ್ಯಮ ಇಲಾಖೆಯಿಂದ ಅನುಮತಿ ಪಡೆದಿರಬೇಕು.

02. ಏಜೆನ್ಸಿಯು ಹಳದಿ ಬೋರ್ಡ್ ಹೊಂದಿರುವ ವಾಹನಗಳನ್ನು ಒದಗಿಸತಕ್ಕದ್ದು.

03. ವಾಹನಚಾಲಕರು, ಲಾಗ್‌ಪುಸ್ತಕ/ಟ್ರಿಪ್‌ಶೀಟ್ ನಿರ್ವಹಿಸಬೇಕು.

04. ವಾಹನ ಉಪಯೋಗದ ನಿಬಂಧನೆಗಳು :-

- ಶಿವಮೊಗ್ಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಶಿವಮೊಗ್ಗಯಿಂದ ಪ್ರಾರಂಭಿಸುವುದು (First Pick Up))
- ಶಿವಮೊಗ್ಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಶಿವಮೊಗ್ಗದವರಿಗೆ ಮುಕ್ತಾಯಗೊಳಿಸುವುದು (Last Pick Up)
- ಶಿವಮೊಗ್ಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಶಿವಮೊಗ್ಗಯಿಂದ ಪ್ರಾರಂಭಿಸಿದ ಅವಧಿಯಿಂದ ಶಿವಮೊಗ್ಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಶಿವಮೊಗ್ಗದವರಿಗೆ ಮುಕ್ತಾಯಗೊಳಿಸಿದ ಅವಧಿಯ ನಡುವೆ ಕ್ರಮಿಸಿದ ಅಂತರವನ್ನು ಮಾತ್ರ ಪರಿಗಣಿಸಲಾಗುವುದು.

ಪ್ರತಿದಿನ ವಾಹನ ಪ್ರಾರಂಭಿಸಿದ ವೇಳೆ ಮತ್ತು ಮುಕ್ತಾಯಗೊಳಿಸಿದ ವೇಳೆಯನ್ನು ಟ್ರಿಪ್ ಶೀಟ್‌ನಲ್ಲಿ ನಮೂದಿಸಿ, ಸಂಬಂಧಿಸಿದ ಮೇಲಾಧಿಕಾರಿಗಳಿಂದ ಧೃಢೀಕರಿಸಿ ಸಹಿ ಪಡೆಯುವ್ವದು.

05. ಒಂದು ವೇಳೆ ಬಾಡಿಗೆ ನೀಡಿದ ವಾಹನವು ದುರಸ್ಥಿಗೆ ಹೋದಾಗ ಬದಲಿ ವಾಹನದ ವ್ಯವಸ್ಥೆಯನ್ನು ಮಾಡುವುದು ಹಾಗೂ ಬದಲಿ ವಾಹನದ ಚಾಲಕರಿಗೆ ಟ್ರಿಪ್‌ಶೀಟ್‌ನ್ನುಒದಗಿಸುವುದು.

06. ಸಮಯಕ್ಕೆ ಸರಿಯಾಗಿ ವಾಹನವನ್ನು ಒದಗಿಸುವುದು ಮತ್ತು ಅಧಿಕಾರಿಗಳು ನೀಡುವ ಸಲಹೆ, ಸೂಚನೆಗಳನ್ನು ಪಾಲಿಸಬೇಕು.

07. ಟೆಂಡದಾರರರು ತಿಂಗಳ ಎಲ್ಲಾ ಕೆಲಸದ ದಿನಗಳಲ್ಲಿ ಮತ್ತು ಅಗತ್ಯವಿದ್ದಲ್ಲಿ ಎಲ್ಲಾ ದಿನಗಳಲ್ಲಿಯೂ ಸರಿಯಾದ ಸಮಯಕ್ಕೆ ವಾಹವನ್ನು ಒದಗಿಸತಕ್ಕದ್ದು.

08. ವಾಹನದ ಮಾಲಿಕರು ಚಾಲಕರಿಗೆ ಗುರುತಿನ ಚೀಟಿ ನೀಡಬೇಕು.

09. ವಾಹನಕ್ಕೆ ಒದಗಿಸುವ ವಾಹನ ಚಾಲಕರು, ವಾಹನ ಚಾಲನಾ ಪರವಾನಿಗೆ ಪತ್ರ ಪಡೆದಿರಬೇಕು ಮತ್ತು ಸಾರಿಗೆ ಇಲಾಖೆಯಿಂದ ನೀಡಲಾಗುವ ಬ್ಯಾಡ್ಜ್ ಹೊಂದಿರಬೇಕು ಹಾಗೂ ಕರ್ತವ್ಯದ ಸಮಯದಲ್ಲಿ ಅವುಗಳನ್ನು ಹೊಂದಿರಬೇಕು.

10. ವಾಹನಚಾಲಕರು ಅಧಿಕಾರಿಗಳು ನೀಡುವ ಸೂಚನೆಗಳನ್ನು ಪಾಲಿಸತಕ್ಕದ್ದು ಒಂದು ವೇಳೆ ವಾಹನ ಚಾಲಕರು ದುರ್ನಡತೆಯಿಂದ ಅಹಿತಕರವಾಗಿ ವರ್ತಿಸಿದರೆ ಕೂಡಲೇ ಅಂತಹ ಚಾಲಕರನ್ನು ಬದಲಾಯಿಸಬೇಕು, ಒಂದು ವೇಳೆ ವಾಹನ ಮಾಲಿಕರು ದುರ್ನಡತೆಯಿಂದ ವರ್ತಿಸಿದ ಚಾಲಕರನ್ನು ಬದಲಾಯಿಸದೇ ಇದ್ದಲ್ಲಿ, 7 ದಿನಗಳ ನೋಟಿಸ್ ನೀಡಿ, ವಾಹನ ಬಾಡಿಗೆ ಪಡೆಯಲು ನೀಡಿದ ಆದೇಶವನ್ನು ರದ್ದುಪಡಿಸಲಾಗುವುದು.

11. ವಾಹನಗಳಿಗೆ ಉತ್ತಮ ನಡತೆ ಹೊಂದಿರುವ ಚಾಲಕರನ್ನು ಒದಗಿಸಬೇಕು.

12. ಜಾರಿಯಲ್ಲಿರುವ ಕಾನೂನಿನ ಪ್ರಕಾರ ವಾಹನ ಹೊಗೆ ತಪಾಸಣೆ (ವಾಯು ಮಾಲಿನ್ಯ) ಪ್ರಮಾಣ ಪತ್ರ ಪಡೆದಿರಬೇಕು.

13. ವಾಹನವನ್ನು ಬಾಡಿಗೆ ನೀಡಿದ ಸಮಯದಲ್ಲಿ ಉಂಟಾಗಬಹುದಾದ ಅಪಘಾತ ಮತ್ತು ಇತರೆ ಹಾನಿಗಳಿಗೆ ವಾಹನದ ಮಾಲಿಕರೇ ಜವಾಬ್ದಾರರು, ಇದಕ್ಕೆ ವಿಧಿಸಬಹುದಾದ ದಂಡ ಮತ್ತು ದಂಡನೆಗಳನ್ನು ವಾಹನದ ಮಾಲಿಕರೆ ಪಾವತಿಸಬೇಕು. ಸಂಸ್ಥೆಯು ಯಾವುದೇ ರೀತಿಯ ಹೊಣೆಗಾರಿಕೆ ಇರುವುದಿಲ್ಲ.

14. ಸಾರಿಗೆ ಇಲಾಖೆ ಅಥವಾ ಇತರೆ ಪ್ರಾಧಿಕಾರಗಳ ನಿಯಮಾವಳಿಗಳನ್ನು ಉಲ್ಲಂಘಿಸಿದಲ್ಲಿ ಅದಕ್ಕೆ ವಿಧಿಸಬಹುದಾದ ದಂಡ ಮತ್ತು ದಂಡನೆಗಳನ್ನು ಪಾವತಿಸುವುದು ವಾಹನದ ಮಾಲಿಕರ ಜವಾಬ್ದಾರಿಯಾಗಿರುತ್ತದೆ.

15. ವಾಹನವು ಅಪಘಾತಕ್ಕೊಳಗಾದಾಗ ಮತ್ತು ಇತರೆ ಯಾವುದೇ ಸಂದರ್ಭಗಳಲ್ಲಿ ವಾಹನ ಮತ್ತು ವಾಹನ ಚಾಲಕರನ್ನು ಹಾಜರುಪಡಿಸಲು ಘನ ನ್ಯಾಯಾಲಯ ಮತ್ತು ಪೊಲೀಸ್ ಇಲಾಖೆಯವರು ಆದೇಶ ನೀಡಿದಾಗ ವಾಹನ ಚಾಲಕರನ್ನು ಹಾಜರುಪಡಿಸುವುದು ವಾಹನದ ಮಾಲಿಕರ ಜವಾಬ್ದಾರಿಯಾಗಿರುತ್ತದೆ.

16. ಆರ್.ಸಿ ಪುಸ್ತಕ, ವಿಮಾ ಪಾಲಿಸಿಯ ದೃಢೀಕೃತ ನಕಲು ಪ್ರತಿಗಳನ್ನು ನಿರ್ದೇಶಕರು, ಶಿವಮೊಗ್ಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಶಿವಮೊಗ್ಗರವರಿಗೆ ಒದಗಿಸಬೇಕು ಹಾಗೂ ವಾಹನದ ಚಾಲಕರಿಗೆ ಆರ್.ಸಿ ಪುಸ್ತಕ ಮತ್ತು ವಿಮಾ ಪಾಲಿಸಿಗಳನ್ನು ನೀಡಿ ವಾಹನ ಕರ್ತವ್ಯ ನಿರ್ವಹಿಸುವಾಗ ಹೊಂದಲು ತಿಳಿಸಬೇಕು.

17. ಒಪ್ಪಂದದ ಅವಧಿಯಲ್ಲಿ ವಾಹನವನ್ನು ವರ್ಗಾವಣೆ ಮಾಡಬಾರದು.

18. ವಾಹನದ ತಪಾಸಣೆ ಮಾಡಿದ ನಂತರ ಕಾರ್ಯಾದೇಶ ನೀಡಲಾಗುವುದು.

19. ಯಶಸ್ವಿ ಟೆಂಡರ್‌ದಾರರಿಗೆ ಕಾರ್ಯಾದೇಶ ನೀಡುವ ಸಮಯದಲ್ಲಿ ಎಲ್ಲಾ ಮೂಲ ದಾಖಲೆಗಳನ್ನು ಒದಗಿಸಬೇಕು, ಒಂದು ವೇಳೆ ಯಾವುದೇ ದಾಖಲೆ ಸುಳ್ಳು ಎಂದು ಕಂಡುಬಂದರೆ ಟೆಂಡರ್‌ನ್ನು ತಿರಸ್ಕರಿಸಿ ಇ.ಎಂ.ಡಿ ಮೊತ್ತವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

20. ವಾಹನವನ್ನು ಒದಗಿಸುವುದು ಕಛೇರಿಯ ವೇಳೆಗೆ ಸೀಮಿತವಾಗಿರದೆ, ಇಲಾಖೆಯ ಅಗತ್ಯಾನುಸಾರ ದಿನದ 24 ಗಂಟೆ ಅವಧಿಯಲ್ಲಿ ಅಧಿಕಾರಿಗಳು ಸೂಚಿಸಿದ ಸಮಯಕ್ಕೆ ವಾಹನದಸೇವೆಯನ್ನು ಒದಗಿಸಬೇಕು.

21. ಕರಾರು ಒಪ್ಪಂದದಲ್ಲಿನ ಅಂಶಗಳಿಗೆ ಮತ್ತು ವಾಹನ ಸೇವೆಪಡೆಯುವಲ್ಲಿ ಯಾವುದೇ ವಿವಾದಗಳು ಉಂಟಾದಲ್ಲಿ ನಿರ್ದೇಶಕರು, ಶಿವಮೊಗ್ಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಶಿವಮೊಗ್ಗರವರು ಮತ್ತು ಟೆಂಡರ್‌ದಾರರು ಪರಸ್ಪರಮಾತುಕತೆಗಳ ಮೂಲಕ ಸೌಹಾರ್ಧಯುತವಾಗಿಬಗೆಹರಿಸಿಕೊಳ್ಳಲು ಬದ್ಧರಾಗಿರಬೇಕು. ಈ ವಿವಾದಗಳಲ್ಲಿ ನಿರ್ದೇಶಕರು, ಶಿವಮೊಗ್ಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಶಿವಮೊಗ್ಗರವರು ತೆಗೆದುಕೊಳ್ಳುವ ತೀರ್ಮಾನವೇ ಅಂತಿಮವಾಗಿರುತ್ತದೆ.

22. ವಾಹನ ಮಾಲಿಕರು ತಮ್ಮ ವಾಹನಕ್ಕೆ ಗ್ಯಾಸ್ ಕಿಟ್ ಅಳವಡಿಸಿದಲ್ಲಿ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಂದ ಆರ್.ಸಿ ಬುಕ್‌ನಲ್ಲಿ ನಮೂದಿಸಿ ದಾಖಲಿಸಿ, ಅನುಮತಿ ಹಾಗೂ ದೃಢೀಕರಣ ಪಡೆದಿರಬೇಕು ಮತ್ತು ಅದರ ಪ್ರತಿ ಒದಗಿಸಬೇಕು.

23. ಪ್ರವಾಸದ ಸಮಯದಲ್ಲಿ ಹೊರಗೆ ತಂಗುವಂತಹ ದಿನಗಳಿಗೆ ಚಾಲಕರಿಗೆ ಯಾವುದೇ ಭತ್ಯೆ ನೀಡಲಾಗುವುದಿಲ್ಲ.

24. ಚಾಲಕರು ರಜೆಯ ಮೇರೆಗೆ ತೆರಳುವ ರಜಾ ದಿನಗಳಂದು ಪೂರ್ವಭಾವಿಯಾಗಿ ಟೆಂಡರ್‌ದಾರರು ಬದಲಿ ಚಾಲಕರ ವ್ಯವಸ್ಥೆ ಮಾಡಬೇಕು ಮತ್ತು ವಾಹನದ ಸಣ್ಣಪುಟ್ಟ ದುರಸ್ಥಿಗಳನ್ನು ಇಲಾಖಾ ಕೆಲಸಗಳಿಗೆ ತೊಂದರೆಯಾಗದಂತೆ ಪೂರ್ವಭಾವಿ ಮಾಹಿತಿ ನೀಡಿ ದುರಸ್ಥಿ ಮಾಡಿಸಬೇಕು.

25. ವಾಹನವನ್ನು ಸಮಯಕ್ಕೆ ಸರಿಯಾಗಿ ಒದಗಿಸಲು ಪದೇ ಪದೇ ವಿಫಲರಾದಲ್ಲಿ ಭದ್ರತಾ ಠೇವಣಿಯನ್ನು ಮುಟ್ಟುಗೋಲು ಹಾಕಿಕೊಂಡು ನಂತರ ಕಡಿಮೆ ದರ ನಮೂದಿಸಿದ ಟೆಂಡರ್‌ದಾರರಿಗೆ ಆದೇಶ ನೀಡಲಾಗುವುದು.

26. ಸಂಸ್ಥೆಗೆ ಬಾಡಿಗೆ ನೀಡುವ ವಾಹನಕ್ಕೆ ವೈದ್ಯಕೀಯ ಅಧೀಕ್ಷಕರು, ಶಿವಮೊಗ್ಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಶಿವಮೊಗ್ಗ ಇವರಿಗೆ ಒದಗಿಸಿದ ವಾಹನ ಎಂದು ನಾಮಫಲಕವನ್ನು ಮಾಲೀಕರು ಅವರ ಸ್ವಂತ ವೆಚ್ಚದಲ್ಲಿ ಅಳವಡಿಸಬೇಕು.

27. ವಾಹನ ನೀತಿಗೆ ಸಂಬಂಧಿಸಿದಂತೆ ಸಾರಿಗೆ ಇಲಾಖೆ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, ಆರ್ಥಿಕ ಇಲಾಖೆ ಹಾಗೂ ಸಿಮ್ಸ್ ಸಂಸ್ಥೆಯಿಂದ ಹೊರಡಿಸಲಾಗುವ ಸುತ್ತೋಲೆಗಳಲ್ಲಿನ ಸೂಚನೆ ಮತ್ತು ನಿಬಂಧನೆಗಳನ್ನು ಪಾಲಿಸಬೇಕು.

28. ಪರಿಶಿಷ್ಟ ಜಾತಿ / ವರ್ಗದ ಫಲಾನುಭವಿಗಳು ಡಾ: ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ, ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮ ಮತ್ತು ಪ್ರವಾಸೋದ್ಯಮ ಇಲಾಖೆ ಮತ್ತು ಇತರೆ ಇಲಾಖೆ/ನಿಗಮಗಳ ವತಿಯಿಂದ ಸಹಾಯಧನ ಮೂಲಕ ಪಡೆದ ವಾಹನಗಳಿಗೆ ಆದ್ಯತೆ ನೀಡಲಾಗುವುದು.

29. ಸಂಸ್ಥೆಗೆ ಒದಗಿಸಿರುವ ವಾಹನವು ಸುಸ್ಥಿತಿಯಲ್ಲಿ ಇಲ್ಲದಿದ್ದಲ್ಲಿ ಅಥವಾ ಅಗತ್ಯ ದಾಖಲಾತಿಗಳನ್ನು ಹೊಂದದೆ ಇದ್ದಲ್ಲಿ ವಾಹನವನ್ನು ಮರಳಿಸಲಾಗುವುದು. ಇದಕ್ಕೆ ಯಾವುದೇ ವೆಚ್ಚವನ್ನು ನೀಡಲಾಗುವುದಿಲ್ಲ. ಈ ಬಗ್ಗೆ ಯಾವುದೇ ತಕರಾರು/ ವಿವಾದಗಳಿದ್ದಲ್ಲಿ ನಿರ್ದೇಶಕರು, ಶಿವಮೊಗ್ಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಶಿವಮೊಗ್ಗರವರ ತೀರ್ಮಾನವೇ ಅಂತಿಮವಾಗಿರುತ್ತದೆ.

ಸಹಿ/-

ನಿರ್ದೇಶಕರು

ಶಿವಮೊಗ್ಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ

ಶಿವಮೊಗ್ಗ